

ಬಸವಣ್ಣನ ನೆನಪುಗಳನ್ನು ಉಸುರುವಂತಿರುವ ಕೃಷ್ಣಾ ನದಿಗೆ ಹೊಂದಿಕೊಂಡ ಸಂಗಮೇಶ್ವರ ದೇಗುಲ

# ದಯೆ-ಮಾನವೀಯತೆಯ ಬಸವ ಮಹಾಮಾರ್ಗ

ಮಾನವಜನ್ಮ ದೊಡ್ಡದು. ಆ ಜನ್ಮದಲ್ಲಿ ಧರ್ಮದ ಪಾತ್ರ ಮುಖ್ಯವಾದುದು ಎನ್ನುವುದು ಸಮಾಜದಲ್ಲಿ ಬೇರೂರಿರುವ ನಂಬಿಕೆಗಳಲ್ಲೊಂದು. ಸಮಾಜ ಸುಧಾರಕರು ಹಾಗೂ ಧಾರ್ಮಿಕ ನಾಯಕರು ಕಾಲ ಕಾಲಕ್ಕೆ ಇಂಥ ಮಾತುಗಳನ್ನು ಹೇಳುತ್ತಲೇ ಬಂದಿದ್ದಾರೆ. ಹನ್ನೆರಡನೇ ಶತಮಾನದ ಬಸವಣ್ಣನವರು ಕೂಡ ಮಾನವಜನ್ಮವನ್ನು ದೊಡ್ಡದು ಎಂದರು. ಆದರೆ, ಆ ಜನ್ಮದಲ್ಲಿ ಮಾನವೀಯತೆ ಅತ್ಯಂತ ಮುಖ್ಯವಾದುದು ಎಂದರು. ಧರ್ಮದ ಮಹತ್ವವನ್ನು ಅವರು ನಿರಾಕರಿಸಲಿಲ್ಲ. ಆದರೆ, ಧರ್ಮದ ಕೇಂದ್ರದಲ್ಲಿ ಅವರು ದಯೆಯನ್ನು ಕಂಡರು. ದಯವೇ ಧರ್ಮದ ಮೂಲವಯ್ಯ ಎಂದರು. ದಯೆಯಿರಬೇಕು ಸಕಲ ಪ್ರಾಣಿಗಳಲ್ಲಿ ಎಂದರು. ಹೀಗೆ, ಮಾನವೀಯತೆ ಮತ್ತು ದಯೆಯನ್ನು ಮಾನವಜನ್ಮದ ಎರಡು ಕೇಂದ್ರಗಳಾಗಿ ಭಾವಿಸಿ, ಆ ಗುಣಗಳನ್ನು ಅನುಷ್ಠಾನಕ್ಕೆ ತರುವುದಕ್ಕಾಗಿ ತಮ್ಮ ಜೀವನವನ್ನೇ ಮುಡಿಪಾಗಿಟ್ಟವರು ಹೆಚ್ಚು ಜನರೇನಿಲ್ಲ. ಬುದ್ಧ, ಗಾಂಧಿ, ಪೈಗಂಬರ್, ಕ್ರಿಸ್ತರ ಸಂತತಿ ತೀರಾ ವಿರಳ. ಈ ಮಾನವೀಯ ಮಾರ್ಗದಲ್ಲಿ ತೋರುಗಂಭದಂತೆ ಕಾಣಿಸುವ ಬಸವಣ್ಣ, ಕನ್ನಡದ ಮಣ್ಣಿನ ಬೆಳಕೆನ್ನುವುದು ಕನ್ನಡಿಗರು ಹೆಮ್ಮೆಪಡಬೇಕಾದ ಸಂಗತಿ.

ಬಸವಣ್ಣನವರದು ನಡೆ ಮತ್ತು ನುಡಿ ಭಿನ್ನವಾದ ಮಾರ್ಗವಲ್ಲ. ಎರಡೂ ಅಭೇದವಾದ 'ಮಹಾಮನೆ'ಯ ಮಹಾಮಾರ್ಗ ಅವರದು. ನಮ್ಮ ಅನೇಕ ನಾಯಕರು ಬಾಯಿ ತೆರೆದರೆ ಉಪದೇಶಾಮೃತವೇ ಹರಿಯುತ್ತದೆ. ಆ ಉಪದೇಶದ ಮೂಲ ಯಾವುದು? ಅವರ ಅನುಭವವೇ? ಉಹುಂ, ಕಟ್ಟಿಕೊಟ್ಟ ಬುತ್ತಿಯ ಉಪದೇಶ ಇಂದಿನವರದು. ನನ್ನನ್ನು ಅನುಸರಿಸಬೇಡ; ನಾನು ಹೇಳುವುದನ್ನು ಅನುಸರಿಸು ಎನ್ನುವಂತಿರುತ್ತದೆ ಇಂದಿನವರ ನಡೆ. ಬಸವಣ್ಣನವರ ನಡೆ ಹಾಗಿರಲಿಲ್ಲ. ಅವರು ಮೊದಲು ನಡೆದರು; ನಂತರ ನಡೆದ ದಾರಿಯ ಬಗ್ಗೆ ಮಾತನಾಡಿದರು.

ಕಾಯಕ ತತ್ವ ಹಾಗೂ ದಾಸೋಹ ಪ್ರಕ್ರಿಯೆಯನ್ನು ಬಸವಣ್ಣನವರ ಪ್ರಯೋಗಶಾಲೆಯ ಎರಡು ಅಮೃತಫಲಗಳನ್ನಾಗಿ ಗುರ್ತಿಸಬಹುದು. 'ಶರಣ' ಎನ್ನುವ ಹಣೆಪಟ್ಟಿ ಕಟ್ಟಿಕೊಂಡು ಯಾವೊಬ್ಬ ವ್ಯಕ್ತಿಯೂ ಬಸವಮಾರ್ಗದಲ್ಲಿ ಸುಮ್ಮನೆ ಕೂತಿರಲಿಲ್ಲ. ಪ್ರತಿಯೊಬ್ಬ ಶರಣನೂ ತನ್ನ ಕುಟುಂಬದ ವೃತ್ತಿಯನ್ನು ಮಾಡುತ್ತಿದ್ದ. ಯಾವ

